'ನಿಮ್ಮ ಅಧೀನಕ್ಕೆ ಒದಗಿಸಲಾದ ಕಮಾಂಡೋ ರೊಬೋಗಳ ವಾರ್ಷಿಕ ನಿರ್ವಹಣಾ ಕರಾರು ಮುಗಿದಿದೆ. ಆದ್ದರಿಂದ ಅವುಗಳ ದುರಸ್ತಿಗೆ ತಗಲುವ ವೆಚ್ಚವನ್ನು ಸಂಚಾರ ವಿಭಾಗವೇ ಭರಿಸಬೇಕಾಗುತ್ತದೆ. ವೆಚ್ಚ ಮಿತಿಗಿಂತ ಜಾಸ್ತಿಯಾಗಬಹುದು.'

'ಅದನ್ನು ಲೆಕ್ಕ ಶಾಖೆಗೆ ತಿಳಿಸಿ ಖರ್ಚು ಭರಿಸಲು ಹೇಳಿದರಾಯಿತು. ಈಗ ಈ ರೊಬೋಗಳನ್ನು ಎಷ್ಟು ದಿನಗಳೊಳಗಾಗಿ ದುರಸ್ತಿ ಮಾಡಿ ಮರಳಿ ನಮ್ಮ ಸುಪರ್ದಿಗೆ ನೀಡುವಿರೆಂದು ಹೇಳಿದರೆ, ಅಲ್ಲಿಯವರೆಗೆ ಬೇರೆ ತಾತ್ಕಾಲಿಕ ವ್ಯವಸ್ಥೆ ಮಾಡಿಕೊಳ್ಳಲು ಅನುಕೂಲವಾಗುತ್ತದೆ.'

'ರೊಬೋಗಳ ಸ್ಥಿತಿಗತಿ ಪರಿಶೀಲಿಸಿದ ಬಳಿಕ ನಿಮಗೆ ಸಂದೇಶ ಕಳುಹಿಸುತ್ತೇವೆ' ಎನ್ನುತ್ತಾ ಶೈನಿ ಮೇಜಿನ ಮೇಲೆ ಮಲಗಿಸಿದ ರೊಬೋಗಳನ್ನು ತನ್ನ ಸಹಚರರೊಂದಿಗೆ ಒಂದೊಂದಾಗಿ ಪರೀಕ್ಷಿಸತೊಡಗಿದ್ದರು.

'ನಿಮಗೆ ಒದಗಿಸಿರುವುದು ಹೈಬ್ರಿಡ್ ರೊಬೋ ಆದ್ದರಿಂದ, ಅದರ ದುರಸ್ತಿ ಕ್ಲಿಷ್ಟಕರವಾಗಿರುತ್ತದೆ. ನಿಮ್ಮ ಸೂಚನೆಗಳನ್ನು ಪಾಲಿಸುವುದಲ್ಲದೆ ಅದು ತನ್ನ ಸ್ವಂತ ತರ್ಕವನ್ನು ಬಳಸಿ ನಿರ್ಧಾರವನ್ನು ತೆಗೆದುಕೊಂಡು ಕಾರ್ಯಾಚರಣೆಗೆ ಇಳಿಯಬೇಕಾಗುತ್ತದೆ. ತನ್ನ ದೃಷ್ಟಿ, ಸದ್ದು, ಧ್ವನಿ, ಸ್ಪರ್ಶ ಸಂವೇದಿಗಳನ್ನು ಚಾಲಾಕಿತನದಿಂದ ಬಳಸಿಕೊಂಡು ಕ್ರಿಯೆಗಿಳಿಯುತ್ತವೆ.'

'ಇವುಗಳನ್ನೆಲ್ಲ ಒಮ್ಮೆಗೇ ದುರಸ್ತಿ ಮಾಡಿ ವಾಪಸ್ಸು ನೀಡುವುದು ನಿಮಗೆ ಸಾಧ್ಯವಾಗದಿರಬಹುದು. ನಮಗೆ ಆಗಿಂದಾಗ್ಗೆ ತಿಳಿಸಿದರೆ ಅದನ್ನು ಸ್ವೀಕರಿಸುವ ವ್ಯವಸ್ಥೆ ಮಾಡಲಾಗುತ್ತದೆ' ಎಂದು ಅವರನ್ನು ಹಿಂಬಾಲಿಸುತ್ತಾ ಹನ್ನಾ ನುಡಿದಾಗ ಶೈನಿ 'ಹಾಗೇ ಆಗಲಿ' ಎಂದು ತನ್ನ ಸಂಭಾಷಣೆಯನ್ನು ಮುಕ್ತಾಯಗೊಳಿಸಿದ್ದರು.

* * *

ಹನ್ನಾ ತನ್ನ ಸುದೀರ್ಘ ವಿಶ್ರಾಂತಿಯ ಬಳಿಕ ಎಂ.ಪಿ. ವಾಕಿಯಲ್ಲಿ ಕಳುಹಿಸಲಾದ ಸಂದೇಶಗಳನ್ನು ಓದುವಾಗ ಹಿಂದಿನ ದಿನ ಶೈನಿ ತಾನು ಹೇಳಿದಂತೆ ವರ್ಕ್‌ಶಾಪ್‌ಗೆ ದುರಸ್ತಿಗೆ ಕಳುಹಿಸಲಾದ ರೊಬೋಗಳ ಯಾವ ಅಂಗಾಂಗಗಳು ದುರಸ್ತಿಯಾಗಬೇಕಿದೆ ಎಂಬುದರ ಪಟ್ಟಿ ಕಳುಹಿಸಿದ್ದ.

| ರೊಬೋ | ಮಾದರಿ | ದುರಸ್ತಿ ಗೊಳಿಸಬೇಕಾದ ಭಾಗ |
|---|---|---|
| 101 | 03 ಸರಣಿ | 2 ಎಂಡ್ ಎಫೆಕ್ಟಾರ್ಸ್ (ಹಸ್ತ) |
| 103 | 04 ಸರಣಿ | ಎಡ ಮ್ಯಾನಿಪುಲೇಟರ್ (ಕೈ) |
| 107 | 0 4 ಸರಣಿ | 1 ಜಾಸ್ (ಭದ್ರಪಡಿಸುವ ಬೆರಳು)110<br>03 ಸರಣಿ ಗೈರೋಸ್ಕೋಪ್ (ಸಮತೋಲನ ಕಾಯ್ದುಕೊಳ್ಳುವ ಉಪಕರಣ) |
| 120 | 04 ಸರಣಿ | ಬೈಪೀಡಲ್ ಜಾಸ್ (2 ಕಾಲುಗಳ ಬೆರಳು) |

... ಪಟ್ಟಿ ಬಹಳಷ್ಟು ಉದ್ದವಿತ್ತು. ಕಮಾಂಡೋ ರೊಬೋ ತಲೆಯಿಂದ ಹಿಡಿದು ಪಾದದವರೆಗೂ ದುರಸ್ತಿಗೊಳಿಸಬೇಕಾದ ಹೊರ ಹಾಗೂ ಒಳ ಭಾಗಗಳು ಬಹಳಷ್ಟಿದ್ದವು. ತಂತ್ರಜ್ಞಾನ ಎಷ್ಟೇ ಬೆಳೆದರೂ ಮನುಷ್ಯನ ರೋಷಾವೇಷಗಳನ್ನು ಮೃಗೀಯ ವರ್ತನೆಯನ್ನು ಹೋಲುತ್ತವೆ ಎನ್ನುವುದಕ್ಕೆ ಇದೊಂದು ನಿದರ್ಶನವಾಗಿತ್ತು.

ಇಷ್ಟು ಅಧಿಕ ಪ್ರಮಾಣದಲ್ಲಿ ರೊಬೋಗಳು ದುರಸ್ತಿಗೊಳ್ಳುತ್ತಿವೆ ಎಂದು ಹಿಂದಿನ ದಿನ ತಾನು ವರ್ಕ್‌ಶಾಪ್‌ನಿಂದಲೇ ಕಮೀಷನರ್ ಸವ್ಯಸಾಚಿ ಅವರೊಂದಿಗೆ ಮಾತನಾಡಿ ಅಂದಿನ ಘಟನಾವಳಿಗಳ ಮಾಹಿತಿ ವಿನಿಮಯ ಮಾಡಿಕೊಂಡಿದ್ದಳು. ಇಂದು ಅವರು ವರ್ಕ್‌ಶಾಪ್‌ಗೆ ಭೇಟಿ ನೀಡಿ ಕ್ಲಿನಿಕ್‌ನಲ್ಲಿರುವ ರೊಬೋಗಳ ಸ್ಥಿತಿಗತಿ ವೀಕ್ಷಿಸಲು ಬರುವೆನೆಂದು ತಿಳಿಸಿದ್ದರು. ಅಂತೆಯೇ ಅವರು ಬರುವಷ್ಟರಲ್ಲಿ ಅವಳೂ ಅಲ್ಲಿರಬೇಕಿತ್ತು.

ಇನ್ನೇನು ಎದ್ದು ಹೊರಡಲು ತಯಾರಿ ನಡೆಸಬೇಕೆನ್ನುವಷ್ಟರಲ್ಲಿ ಅವಿರತ್‌ನ ಸಂದೇಶ ಗಮನಸೆಳೆದಿತ್ತು. 'ಹನ್ಸ್... ನೆನ್ನೆ ನಾನು ಹಾಗೆ ತುರ್ತಾಗಿ ನಿನ್ನನ್ನು ವರ್ಕ್‌ಶಾಪ್‌ನಲ್ಲೇ ಬಿಟ್ಟು ಹೊರಡಬಾರದಾಗಿತ್ತು. ಆದರೆ ಕರ್ತವ್ಯಕ್ಕೆ ಕರೆಬಂದಾಗ ಬೇಡವೆನ್ನಲಾಗುವುದಿಲ್ಲವಷ್ಟೇ. ನೆನ್ನೆ ಬಹಳಷ್ಟು ಸಂಖ್ಯೆಯಲ್ಲಿ ರೊಬೋಗಳಿಗೆ ಹಾನಿ ಉಂಟಾಯಿತು ಎಂದು ಗೊತ್ತಾಯಿತು. ನಿನಗೇನೂ ಆಗಿಲ್ಲ ತಾನೇ...?' ಅವನ ಕಾಳಜಿ ಸಂದೇಶದಲ್ಲಿ ಧ್ವನಿಸಿತ್ತಾದರೂ ಅದಕ್ಕೆ ಕೂಡಲೇ ಉತ್ತರಿಸಬೇಕೆನಿಸಿರಲಿಲ್ಲ.

ಆದರೆ ಸ್ವಲ್ಪ ಸಮಯದಲ್ಲೇ ಮನಸ್ಸು ಬದಲಾಯಿಸಿ ಪ್ರತಿಕ್ರಿಯಿಸಿದಳು. 'ನನಗೇನೂ ಅಂತಹದ್ದು ಆಗಿಲ್ಲ. ಡೋಂಟ್ ವರಿ. ಸಣ್ಣ ತರಚಿದ ಗಾಯವಾಗಿತ್ತಷ್ಟೇ.'

ಅವಿರತ್ ಅಷ್ಟಕ್ಕೆ ಮಾತು ನಿಲ್ಲಿಸದೆ ಚಾಟ್ ಮಾಡತೊಡಗಿದ್ದ. 'ನೀನು ಸಣ್ಣ ಗಾಯವೆಂದು ಹೇಳಿದರೆ ನಾನು ನಂಬಲಾರೆ. ಸಂಜೆ ಸಾಧ್ಯವಾದರೆ ನಾನು ನಿನ್ನ ಮನೆಗೆ ಬರಲು ಅಭ್ಯಂತರವಿಲ್ಲ ತಾನೇ?'

'ನನಗೇನೂ ಆಗಿಲ್ಲವೆಂದು ಹೇಳಿದೆನಲ್ಲ ಅವಿ. ನೀವ್ಯಾಕೆ ಅಷ್ಟೊಂದು ತಲೆ ಕೆಡಿಸ್ಕೋತೀರಿ. ಇನ್ನು ಸ್ವಲ್ಪ ಹೊತ್ತಿಗೆ ಕಮೀಷನರ್ ವರ್ಕ್‌ಶಾಪ್‌ಗೆ ಬರಲಿದ್ದಾರೆ. ನಾನಿನ್ನು ಹೊರಡಬೇಕು' ಎಂದು ತುಸು ಅವಸರ ವ್ಯಕ್ತಪಡಿಸಿದಳು.

'ಅರೆ, ಕಮೀಷನರ್ ಬಂದರೇನಂತೆ. ಅನಂತರ ನಾನು ನಿನ್ನನ್ನು ನೋಡಲು ನಿನ್ನ ಮನೆಗೆ ಬಂದರಾಗದೆ...'

ಅವನದು ಕಾಳಜಿಯೋ ವಿಪರೀತ ಕುತೂಹಲವೋ ಅರಿಯದಾದಳು. ಆದರೆ ಇಬ್ಬರೂ ಕೆಲವು ದಿನ ಒಡನಾಡಿದ್ದರಿಂದ ಅವನಿಗೆ ಮನೆಗೆ ಆಹ್ವಾನಿಸುವಷ್ಟೂ ಸೌಜನ್ಯವನ್ನು ತಾನು ತೋರದಿರುವುದು ಸರಿ ಎನಿಸದೆ 'ಆಗಲಿ' ಎಂದು ಸಮ್ಮತಿಯ ಮುದ್ರೆ ಒತ್ತಿದಳು. ನಂತರ ವರ್ಕ್‌ಶಾಪ್‌ಗೆ ಹೊರಡುವ ಆತುರದಲ್ಲಿ ಅವಿರತ್‌ನ ವಿಚಾರವನ್ನು ಬದಿಗೆ ತಳ್ಳಿ ಹೊರಡಲು ತಯಾರಾದಳು. ವರ್ಕ್‌ಶಾಪ್‌ನಲ್ಲಿ ಸಾಲುಸಾಲಾಗಿ ರೊಬೋಗಳನ್ನು ಉದ್ದನೆಯ ಮೇಜಿನ ಮೇಲೆ ಹಾಸಿರುವುದನ್ನು ಕಮೀಷನರ್ ಸವ್ಯಸಾಚಿ ಹಾಗೂ ಬುಲೆಟ್ ಮೆಟ್ರೋ ಕಮೀಷನರ್ ಶಮಿತವ್ ಒಂದೊಂದಾಗಿ ವೀಕ್ಷಿಸುತ್ತಾ ಹೋದರು.

'ಡ್ಯಾಮೇಜ್ ಕಂಟ್ರೋಲ್' ವಿಧಾನವನ್ನು ಹನ್ನಾ ಪಾಲಿಸಿದ್ದರೂ ರೊಬೋಗಳ ದುರಸ್ತಿ ಖರ್ಚುವೆಚ್ಚಗಳನ್ನು ದ್ವಿಗುಣಗೊಳಿಸಿತ್ತು.

ಶೈನಿ ಕಮೀಷನರ್ ಅವರನ್ನು ಒಂದೊಂದೇ ಮೇಜಿನ ಬಳಿ ಕರೆದುಕೊಂಡು ಹೋಗಿ ವಿವರಿಸತೊಡಗಿದ್ದ. ಈ ರೊಬೋನ ಬ್ಯಾಲೆನ್ಸರ್ ಹಾಳಾಗಿದ್ದು ತಕ್ಷಣಕ್ಕೆ ರಿಪ್ಲೇಸ್‌ಮೆಂಟ್ ಮಾಡಬಹುದಾಗಿದೆ. ಆದರೆ ಇದರ ತಲೆಗೆ ಆದ ಪೆಟ್ಟಿನಿಂದ ಅದರ ಮೆದುಳಿನ ಕಸಿಯನ್ನು ಲ್ಯಾಬೊರೇಟರಿಯಲ್ಲಿ ಮಾಡಬೇಕಿದ್ದು ಸಮಯ ಹಿಡಿಯುತ್ತದೆ... ಇನ್ನು ಈ ರೋಬೋ ಮುಖಕ್ಕೆ ಹರಿತವಾದ ವಸ್ತುವನ್ನು ಎಸೆದಿರುವುದರಿಂದ, ಅದರ ಮುಖದ ಕವಚ ಹರಿದಿದೆ. ಇದಕ್ಕೆ ಕೂಡಲೇ ಬದಲಿ ವ್ಯವಸ್ಥೆ ಮಾಡುತ್ತೇವೆ... ಈ ರೊಬೋನ ಕಾಲುಗಳು ದುರಸ್ತಿಗೊಳಗಾಗಿದ್ದು, ರಿಪ್ಲೇಸ್‌ಮೆಂಟ್ ಮಾಡಬಹುದು. ಆದರೆ ಇದರ ದೇಹವನ್ನು ಬ್ಯಾಲೆನ್ಸರ್ ತಡೆಯಲಿಕ್ಕಾಗುವುದಿಲ್ಲ. ಆದ್ದರಿಂದ ಬೈಪೀಡಲ್ (ಎರಡು ಕಾಲುಳ್ಳ) ಇರುವ ಈ ರೊಬೋವನ್ನು ಕ್ವಾಡ್ರಾಪೆಡ್ (ನಾಲ್ಕು ಕಾಲುಳ್ಳ) ರೊಬೋವನ್ನಾಗಿ ಪರಿವರ್ತಿಸಬೇಕಾಗುತ್ತದೆ. ಆಗ ಅದಕ್ಕೆ ಓಡಾಡಲು, ಎಗರಲು, ಬಗ್ಗಲು ಸಾಧ್ಯವಾಗುತ್ತದೆ...' ಶೈನಿಯ ವಿವರಣೆ ಅವಿರತವಾಗಿ ಮುಂದುವರೆಯುತ್ತಿದ್ದಂತೆ ಸವ್ಯಸಾಚಿಯವರು ಯೋಚನೆಗೀಡಾಗಿದ್ದರು.

'ತಮ್ಮ ರೋಬೋ ಪಡೆಯಲ್ಲಿ ವಿವಿಧ ಆಕಾರಗಳುಳ್ಳ ರೊಬೋಗಳಿದ್ದರೆ ಸಮಾನತೆ ಎಲ್ಲಿಂದ ಬರುತ್ತದೆ...?'

ಅವರು ಯೋಚಿಸುತ್ತಾ ಮುಂದೆ ನಡೆಯುತ್ತಿದ್ದಂತೆ ಪರದೆಯೊಂದನ್ನು ಹಿಡಿದು ಒಂದು ಬಿಳಿಯ ಪಾರಿವಾಳವು ಹಾರುತ್ತಾ ಅವರ ಮುಂದೆ ಆಯಾ ರೊಬೋ ದೇಹದ ಉಪಾಂಗಗಳ ಸ್ಥಿತಿಗತಿಗಳ 3ಡಿ ಚಿತ್ರಣವನ್ನು ಪರದೆಯ ಮೇಲೆ ಮೂಡಿಸುತ್ತಿತ್ತು.

'ನಮ್ಮ ರೊಬೋ ಪಾರಿವಾಳ ನೈಜ ಸ್ಥಿತಿಗತಿಗಳನ್ನೇ ನಮಗೆ ಅನಾವರಣ ಮಾಡುತ್ತಿದೆ. ಒಳ ಉಪ ಅಂಗಗಳ ಸ್ಕ್ಯಾನಿಂಗ್ ಸಹ ಆಗಿದ್ದು, ಅದರಿಂದ ನಮಗೆ ಎಷ್ಟು ಉಪ ಅಂಗಗಳ ಬದಲಿ ವ್ಯವಸ್ಥೆ ಆಗಬೇಕಿದೆ, ಎಷ್ಟನ್ನು ದುರಸ್ತಿ ಮಾಡಬಹುದೆಂದು ಅಂದಾಜು ಸಿಕ್ಕಿದೆ.'

'ಆದರೆ ನೀವು ನೀಡಿರುವ ದುರಸ್ತಿ ಕಾರ್ಯಗಳು ಬಹಳಷ್ಟಿದ್ದು, ನಮಗಾಗುವ ಹೊರೆಯನ್ನು ಕಡಿಮೆ ಮಾಡುವ ದಾರಿಯಿಲ್ಲವೇ?' ಎಂದು ಸವ್ಯಸಾಚಿ ನೇರವಾಗಿ ವಿಷಯಕ್ಕೆ ಬಂದಿದ್ದರು.

'ಸರ್, ನಮ್ಮದು ದುರಸ್ತಿ ಕೆಲಸವಷ್ಟೇ. ಇದರ ಬಿಡಿ ಭಾಗಗಳನ್ನು ಇತರೆಡೆಗಳಿಂದ ಇಲ್ಲವೇ ತಯಾರಕರಿಂದ ತರಿಸಬೇಕಾಗುತ್ತದೆ. ಕೆಲವೊಂದು ಭಾಗಗಳನ್ನು ಸಂಶೋಧನಾ ಕೇಂದ್ರದಲ್ಲಿ ಕಸಿ ಮಾಡಲಾಗುತ್ತದೆ. ಆದ್ದರಿಂದ ಖರ್ಚು ಅನಿವಾರ್ಯವಾಗಿದೆ.'

'ಆಯ್ತು ಬಿಡಿ. ನಮ್ಮ ರೊಬೋಗಳು ಮೂಲ ಆಕಾರವನ್ನು ಪಡೆಯದೆ ಹೊಸ ರೂಪವನ್ನು ಪಡೆಯುತ್ತಾರೆ ಎಂದಾಯ್ತು. ಕಾಲು ಊನವಿರುವ